# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರ ಕಛೇರಿ, ಕೇಂದ್ರ ಕ್ಛೇರಿ, ಎನ್.ಆರ್.ವೃತ್ತ, ಬೆಂಗಳೂರು-02


ಸಂಖ್ಯೆಪ್ರಅ/ಪಿಆರ್/ 316/17-18 ದಿನಾಂಕ: 13-07-2017

ಗೆ,

**ಮುಖ್ಯ ಅಭಿಯಂತರರು,**
*ಪೂರ್ವ ವಲಯ, ಪಶ್ಚಿಮ ವಲಯ, ದಕ್ಷಿಣ ವಲಯ,*
*ರಾ.ರಾ.ನಗರ ವಲಯ, ಬೊಮ್ಮನಹಳ್ಳಿ ವಲಯ,*
*ದಾಸರಹಳ್ಳಿ ವಲಯ, ಮಹದೇವಪುರ ವಲಯ,*
*ಯಲಹಂಕ ವಲಯ*

## "ಸುತ್ತೋಲೆ"

**ವಿಷಯ:** ಅನಧೀಕೃತ ಓ.ಎಫ್.ಸಿ. ಕೇಬಲ್ ಮತ್ತು ಟವರ್ ನಿರ್ಮೂಲನ ಕುರಿತು.

***********

ಅಲ್ಲದೇ ಪಾಲಿಕೆಯ ವ್ಯಾಪ್ತಿಯಲ್ಲಿ ಓ.ಎಫ್.ಸಿ. ಅಳವಡಿಕೆಗೆ ಸಂಬಂಧಿಸಿದಂತೆ ಓ.ಎಫ್.ಸಿ. -ಜಿ.ಐ.ಎಸ್ ಅನುಮತಿ ನಿರ್ವಹಣೆ ಮಾಡುವ ತಂತ್ರಾಂಶದಲ್ಲಿ ಅನುಮತಿ ಪಡೆದು ಮತ್ತು ಅನುಮತಿ ರಹಿತವಾಗಿ ಅಳವಡಿಸಿರುವ ಓ.ಎಫ್.ಸಿ. ಬಗ್ಗೆ ಸ್ವಯಂಘೋಷಣೆ ಮಾಡುವ ಸೌಲಭ್ಯವನ್ನು ಅಳವಡಿಸಲಾಗಿದ್ದು ಸದರಿ ತಾಣದಲ್ಲಿ ಇಲ್ಲಿಯವರೆಗೆ ಅನುಮತಿ ಪಡೆದು ಮತ್ತು ಅನುಮತಿ ರಹಿತವಾಗಿ ಭೂಗತವಾಗಿ ಅಲ್ಲದೇ ಮೇಲ್ಮಟ್ಟದಲ್ಲಿ ಅಳವಡಿಸಿರುವ ಓ.ಎಫ್.ಸಿ. ಬಗ್ಗೆ ಸ್ವಯಂಘೋಷಣೆ ಮಾಡುವಂತೆ ಓ.ಎಫ್.ಸಿ. ಸಂಸ್ಥೆಗಳಿಗೆ ಸೂಚಿಸಲಾಗಿರುತ್ತದೆ. ಹೀಗೆ ಘೋಷಿಸಲಾದ ಓ.ಎಫ್.ಸಿ. ವಿವರಗಳು ಪಾಲಿಕೆಯ ಅಧಿಕಾರಿಗಳಿಗೆ ಓ.ಎಫ್.ಸಿ.-ಜಿ.ಐ.ಎಸ್ ಜಾಲತಾಣದಲ್ಲಿ ಲಭ್ಯವಿರುತ್ತದೆ.

ಉಳಿದಂತೆ ಓ.ಎಫ್.ಸಿ. ಜಾಲದ ಅವಿಭಾಜ್ಯ ಅಂಗವಾಗಿರುವ ಮೊಬೈಲ್ ಟವರ್/ಟೆಲಿಕಮ್ಯುನಿಕೇಷನ್ ಟವರ್‌ಗಳ ಸ್ಥಾಪನೆಯು ಕೆ.ಎಂ.ಸಿ. ಕಾಯ್ದೆಯ ಪರಿವ್ಯಾಪ್ತಿಗೆ ಒಳಪಡುತ್ತಿದ್ದು ಇಂತಹ ಟವರ್‌ಗಳ ಸ್ಥಾಪನೆಗೆ ಪಾಲಿಕೆಯ ಅನುಮತಿ ಅತ್ಯಗತ್ಯವಾಗಿರುತ್ತದೆ. ಆದರೂ ಸಹಿತ ಪಾಲಿಕೆಯ ಯಾವುದೇ ಅನುಮತಿ ಪಡೆಯದೇ ಬೆಂಗಳೂರು ನಗರಾದ್ಯಂತ ಟೆಲಿಕಮ್ಯುನಿಕೇಷನ್ ಟವರ್‌ಗಳನ್ನು ಹಲವಾರು ಸಂಸ್ಥೆಗಳು ಅಳವಡಿಸಿದ್ದು ಈ ಬಗ್ಗೆ ಸಾರ್ವಜನಿಕರಿಂದ ಮತ್ತು ಜನಪ್ರತಿನಿಧಿಗಳಿಂದ ಅಸಂಖ್ಯ ದೂರುಗಳು ಸ್ವೀಕಾರಗೊಂಡಿವೆ. ಕರ್ನಾಟಕ ಸರ್ಕಾರವು ಟೆಲಿಕಮ್ಯುನಿಕೇಷನ್ ಟವರ್‌ಗಳ ಸ್ಥಾಪನೆಯ ಬಗ್ಗೆ ನಿಯಮಾವಳಿಗಳನ್ನು ರೂಪಿಸುತ್ತಿದ್ದು ಕರಡು ನಿಯಮಾವಳಿಗಳನ್ನು ಈಗಾಗಲೇ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ. ಸದರಿ ಕರಡು ನಿಯಮಾವಳಿಗಳು ಟೆಲಿಕಮ್ಯುನಿಕೇಷನ್ ಟವರ್‌ಗಳನ್ನು ಸ್ಥಾಪಿಸಬೇಕಿರುವ ಸ್ಥಳಗಳ ಆಯ್ಕೆಯ ಬಗ್ಗೆ ನಿಯಮಗಳು ಮತ್ತು ನಿಗದಿತ ಶುಲ್ಕವನ್ನು ಹೊಂದಿರುತ್ತವೆ ಮತ್ತು ನಿಕಟ ಭವಿಷ್ಯದಲ್ಲಿ ಸದರಿ ನಿಯಮಾವಳಿಗಳು ಜಾರಿಗೆ ಬರುವ ನಿರೀಕ್ಷೆಯಿದೆ.

ಇವುಗಳ ಹಿನ್ನೆಲೆಯಲ್ಲಿ ದಿನಾಂಕ 10-07-2017ರಂದು ಓ.ಎಫ್.ಸಿ. ಸಂಸ್ಥೆಗಳೊಂದಿಗೆ ನಡೆದ ಸಭೆಯಲ್ಲಿ ಸಭಾಧ್ಯಕ್ಷರಾದ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮಾನ್ಯ ಅಧ್ಯಕ್ಷರು ಹದಿನೈದು ದಿಗಳೊಳಗಾಗಿ ಬೆಂಗಳೂರು ನಗರಾದ್ಯಂತ ಸ್ಥಾಪಿಸಿರುವ ಟೆಲಿಕಮ್ಯುನಿಕೇಷನ್ ಟವರ್‌ಗಳ ವಿವರಗಳನ್ನು ಸ್ವಯಂಘೋಷಣೆ ಮೂಲಕ ಸಲ್ಲಿಸಲು ಓ.ಎಫ್.ಸಿ. ಮತ್ತು ಟವರ್ ನಿರ್ಮಾಣ ಸಂಸ್ಥೆಗಳಿಗೆ ಸೂಚಿಸಿರುತ್ತಾರೆ

ಈಗಾಗಲೇ ಪ್ರತಿ ವಾರ್ಡ್ ವ್ಯಾಪ್ತಿಯಲ್ಲಿ ಅಳವಡಿಸುವ ಎಲ್ಲ ಅಧೀಕೃತ ಓ.ಎಫ್.ಸಿ. ಅನುಮತಿ ಪತ್ರಗಳ ಪ್ರತಿಯನ್ನು ಉಪವಿಭಾಗಗಳಿಗೆ ಕಳುಹಿಸಲಾಗುತ್ತಿದೆ. ಅಲ್ಲದೇ ಪಾಲಿಕೆಯ ಓ.ಎಫ್.ಸಿ-ಜಿ.ಐ.ಎಸ್. ಜಾಲತಾಣದಲ್ಲಿ ವಲಯ ಮಟ್ಟದಲ್ಲಿ ಸಂಸ್ಥೆಗಳೇ ತಮ್ಮ ಓ.ಎಫ್.ಸಿ. ಜಾಲದ ಬಗ್ಗೆ ಮಾಡಿಕೊಂಡಿರುವ ಸ್ವಯಂಘೋಷಿತ ವಿವರಗಳು

ಪ್ರಧಾನ ಅಭಿಯಂತರರ ಕಛೇರಿ
ಸಂಖ್ಯೆ 3404
ದಿನಾಂಕ 19/7/17
19/7/17

ಲಭ್ಯವಿರುತ್ತವೆ.ಆದ್ದರಿಂದ ಸದರಿ ವಿವರಗಳನ್ನು ದಿನಾಂಕ 14-07-2017 ರಿಂದ ದಿನಾಂಕ 21-07-2017ರವರೆಗೆ ಪರಿಶೀಲಿಸಿ ಸ್ವಯಂಘೋಷಣೆ ಮಾಡಿಕೊಳ್ಳದ ಮತ್ತು ಪಾಲಿಕೆಯಿಂದ ಅನುಮೋದನೆ ಪಡೆಯದೇ ಅನಧಿಕೃತವಾಗಿ ಅಳವಡಿಸಿದ ಓ.ಎಫ್.ಸಿ. ಅಳವಡಿಕೆಗಳನ್ನು ಪಟ್ಟಿ ಮಾಡಿ ಮುಖ್ಯ ಅಭಿಯಂತರರು-ಓ.ಎಫ್.ಸಿ. ಕೋಶಕ್ಕೆ ಅಡಕವಾಗಿರಿಸಿದ ನಮೂನೆಯಲ್ಲಿ ಸಲ್ಲಿಸಲು ಕೋರಿದೆ. ಆನಂತರದಲ್ಲಿ ಅನಧಿಕೃತ ಕೇಬಲ್‌ಗಳನ್ನು ತೆರವುಗೊಳಿಸಲು ಮತ್ತು ದಂಡ ವಿಧಿಸಲು ವಲಯ ವ್ಯಾಪ್ತಿಯ ಕಿರಿಯ ಅಭಿಯಂತರರು, ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರಿಗೆ ಈ ಮೂಲಕ ಸೂಚಿಸಲಾಗಿದೆ.

ಅಲ್ಲದೇ ಪ್ರತಿ ವಾರ್ಡ್ ವ್ಯಾಪ್ತಿಯಲ್ಲಿ ಅಳವಡಿಸಿರುವ ಎಲ್ಲ ಮೊಬೈಲ್ ಟವರ್/ಟೆಲಿಕಮ್ಯುನಿಕೇಷನ್ ಟವರ್‌ಗಳ ಪಟ್ಟಿ ಮಾಡಿ ವಿವರಗಳನ್ನು ಅಡಕವಾಗಿರಿಸಿದ ನಮೂನೆ 2ರಲ್ಲಿ ಸಲ್ಲಿಸಲು ಕೂಡ ಸೂಚಿಸಿದೆ. ಅಲ್ಲದೇ ಅಭಿಯಂತರರು ತಮ್ಮ ವಾರ್ಡ್ ವ್ಯಾಪ್ತಿಯ ಮೊಬೈಲ್ ಟವರ್/ಟೆಲಿಕಮ್ಯುನಿಕೇಷನ್ ಟವರ್‌ಗಳ ಅಧಿಕೃತತೆಯ ಬಗ್ಗೆ ದೃಢೀಕರಿಸಿಕೊಳ್ಳಲು ಮೊಬೈಲ್ ಟವರ್/ಟೆಲಿಕಮ್ಯುನಿಕೇಷನ್ ಟವರ್‌ಗಳ ವಿವರಗಳು ಲಭ್ಯವಿರುವ https://tarangsanchar.gov.in/emfportal ಜಾಲತಾಣವನ್ನು ಬಳಸಿಕೊಳ್ಳಬಹುದಾಗಿರುತ್ತದೆ. ಹದಿನೈದು ದಿನಗಳ ಒಳಗೆ ಸ್ವಯಂಘೋಷಣೆ ಮಾಡಿಕೊಂಡ ಟವರ್‌ಗಳ ವಿವರಗಳನ್ನು ವಲಯ ಕಛೇರಿಗಳ ಮೂಲಕ ಪ್ರತಿ ವಾರ್ಡ್‌ಗಳಿಗೆ ಕಳುಹಿಸಲಾಗುವುದು. ಹೀಗೆ ಸ್ವಯಂಘೋಷಣೆ ಮಾಡಿಕೊಳ್ಳದ ಎಲ್ಲ ಟವರ್‌ಗಳನ್ನು ತಂಡಗಳನ್ನು ಮಾಡಿ ವಲಯ ಅಧಿಕಾರಿಗಳ ಸಹಕಾರದಲ್ಲಿ ತೆರವುಗೊಳಿಸಲಾಗುವುದು. ಈ ಹಿನ್ನೆಲೆಯಲ್ಲಿ ಅಗತ್ಯ ಮಾಹಿತಿಗಳನ್ನು ದಿನಾಂಕ 22-07-2017ರ ಒಳಗೆ ತಲುಪುವಂತೆ ಸಲ್ಲಿಸಲು ಸೂಚಿಸಿದೆ.

ಪೂರಕವಾಗಿ ಓ.ಎಫ್.ಸಿ. ಅಳವಡಿಕೆ ಸಂದರ್ಭದಲ್ಲಿ ಓ.ಎಫ್.ಸಿ. ಸಂಸ್ಥೆಗಳವರು ಅಪರಾಧಿಕ ಹಿನ್ನೆಲೆಯುಳ್ಳ ವ್ಯಕ್ತಿಗಳನ್ನು ಬಳಸುತ್ತಿರುವ ಪ್ರಕರಣಗಳು ಹೆಚ್ಚುಹೆಚ್ಚಾಗಿ ಬೆಳಕಿಗೆ ಬರುತ್ತಿದ್ದು ಇದರಿಂದಾಗಿ ಅಧಿಕಾರಿಗಳಿಗೆ, ಸಾರ್ವಜನಿಕರಿಗೆ ಮತ್ತು ಪ್ರಜಾಪ್ರತಿನಿಧಿಗಳಿಗೆ ಸಹ ಬೆದರಿಕೆಯೊಡ್ಡುವ ಸಂದರ್ಭಗಳು ಘಟಿಸುತ್ತಿವೆ. ಇಂತಹ ಭೀತಿಕಾರಕ ತಂತ್ರಗಳನ್ನು ನಿವಾರಿಸುವ ನಿಟ್ಟಿನಲ್ಲಿ ಅಧಿಕಾರಿಗಳಿಗೆ ಬೆದರಿಕೆಯೊಡ್ಡಿದಲ್ಲಿ ಅಥವಾ ಸಾರ್ವಜನಿಕರಿಗೆ ಬೆದರಿಕೆಯೊಡ್ಡಿದ ಸಂದರ್ಭಗಳು ಅರಿವಿಗೆ ಬಂದಲ್ಲಿ ಕೂಡಲೇ ಆರಕ್ಷಕ ಠಾಣೆಯಲ್ಲಿ ಫಿರ್ಯಾದು ದಾಖಲಿಸಿ ಓ.ಎಫ್.ಸಿ.ಕೋಶಕ್ಕೆ ಮಾಹಿತಿ ನೀಡಲು ಸೂಚಿಸಿದೆ. ಇಂತಹ ಸಂದರ್ಭಗಳಲ್ಲಿ ಸಂಬಂಧಪಟ್ಟ ಸಂಸ್ಥೆಗಳ ಮೇಲೆ ನಿರ್ದಾಕ್ಷಿಣ್ಯವಾಗಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಓ.ಎಫ್.ಸಿ.ಕೋಶದ ಮುಖ್ಯ ಅಭಿಯಂತರರಿಗೆ ಸೂಚಿಸಿದೆ.

ಆಯುಕ್ತರು

ಪ್ರತಿ:

1. ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ
2. ವಿಶೇಷ ಆಯುಕ್ತರು(ಯೋಜನೆ)
3. ಪ್ರಧಾನ ಅಭಿಯಂತರರು
4. ಎಲ್ಲ ವಲಯ ಅಪರ/ಜಂಟಿ ಆಯುಕ್ತರು
5. ಎಲ್ಲ ವಲಯಗಳ ಮುಖ್ಯ ಅಭಿಯಂತರರಿಗೆ ಸೂಕ್ತ ಕ್ರಮಕ್ಕಾಗಿ.
6. ಅಧೀಕ್ಷಕ ಅಭಿಯಂತರರು (ಓ.ಎಫ್.ಸಿ.ಕೋಶ)
7. ಕಛೇರಿ ಕಡತಕ್ಕೆ.

## ನಮೂನೆ-1
## ಅನಧೀಕೃತ ಓ.ಎಫ್.ಸಿ. ಅಳವಡಿಕೆ ವಿವರ

<table>
<tr><td>ವಾರ್ಡ್ ಸಂಖ್ಯೆ</td><td></td><td>ವಾರ್ಡ್ ಹೆಸರು</td><td colspan="5"></td></tr>
<tr><td>ಉಪವಿಭಾಗ</td><td colspan="3"></td><td colspan="2">ವಿಭಾಗ</td><td colspan="2"></td></tr>
<tr><td>ಕ್ರ.ಸಂ.</td><td>ರಸ್ತೆ</td><td>ಎಲ್ಲಿಂದ</td><td>ಎಲ್ಲಿಯವರೆಗೆ</td><td>ಉದ್ದ</td><td>ಭೂಗತ/ಮೇಲ್ಮಟ್ಟದ ಅಳವಡಿಕೆ</td><td>ಸಂಸ್ಥೆ</td><td>ಸದರಿ ಅಳವಡಿಕೆಯು ಜಿ.ಐ.ಎಸ್. ಜಾಲತಾಣದಲ್ಲಿ ನಮೂದಾಗಿದೆಯೇ?</td></tr>
<tr><td>1</td><td></td><td></td><td></td><td></td><td></td><td></td><td></td></tr>
<tr><td>2</td><td></td><td></td><td></td><td></td><td></td><td></td><td></td></tr>
<tr><td>...</td><td></td><td></td><td></td><td></td><td></td><td></td><td></td></tr>
<tr><td></td><td colspan="3">ಒಟ್ಟು</td><td></td><td></td><td></td><td></td></tr>
</table>

## ನಮೂನೆ-2
## ಟವರ್ ಸ್ಥಾಪನೆ ವಿವರ

<table>
<tr><td>ವಾರ್ಡ್ ಸಂಖ್ಯೆ</td><td colspan="2"></td><td>ವಾರ್ಡ್ ಹೆಸರು</td><td colspan="3"></td></tr>
<tr><td>ಉಪವಿಭಾಗ</td><td colspan="2"></td><td>ವಿಭಾಗ</td><td colspan="3"></td></tr>
<tr><td>ಕ್ರ.ಸಂ.</td><td>ರಸ್ತೆ</td><td>ಸ್ವತ್ತಿನ ಪಿ.ಐ.ಡಿ</td><td>ಸ್ವತ್ತಿನ ವಿಳಾಸ ಮತ್ತು ಮಾಲೀಕರು</td><td>ಟವರ್‌ಗೆ ನಿಗದಿತವಾಗಿ ತೆರಿಗೆ ಪಾವತಿಸಿದ್ದಾರೆಯೆ?</td><td>ಟವರ್ ಸ್ಥಾಪಿಸಿದ ಸಂಸ್ಥೆ</td><td>ಸ್ಥಾಪನೆಯಾದ ಅಜಮಾಸು ದಿನಾಂಕ</td></tr>
<tr><td></td><td></td><td></td><td></td><td></td><td></td><td></td></tr>
<tr><td></td><td></td><td></td><td></td><td></td><td></td><td></td></tr>
<tr><td></td><td></td><td></td><td></td><td></td><td></td><td></td></tr>
<tr><td></td><td></td><td></td><td></td><td></td><td></td><td></td></tr>
<tr><td></td><td></td><td></td><td></td><td></td><td></td><td></td></tr>
</table>